ಮಾತಿನಲ್ಲಿ ಅವನಿಗೇ ಭರವಸೆ ಇದ್ದಂತಿರಲಿಲ್ಲ.

'ಆಯ್ತು' ಎಂದು ಕಣ್ಣುಮುಚ್ಚಿಕೊಂಡೆ.

* * *

ಬಿಟ್ಟು ಬಂದಿರುವ ಆಶ್ರಮ, ಗಾಬರಿಗೊಂಡ ಪರಿಚಿತ ಮುಖಗಳು, ನಾನಲ್ಲಿ ಬಿಟ್ಟುಬಂದಿರುವ ನಿತ್ಯಬಳಕೆಯ ವಸ್ತುಗಳು ನೆನಪಿಗೆ ಬಂದವು. ಇನ್ನೆಷ್ಟು ದಿನವೋ? ಆರು ತಿಂಗಳ ಹಿಂದೆ ನಾನಾಗಿಯೇ ಬಿಟ್ಟುಬಂದ, ಈಗ ಮತ್ತೆ ಹೋಗಬೇಕಾಗಿರುವ ನನ್ನ ಮನೆ ಈಗ ಹೇಗಿದೆಯೋ? ಮತ್ತೆ ನಾಳೆ ಎದುರಿಸಬೇಕಾದ ವಾಸ್ತವಗಳು- ನಾನು ಎದುರಿಗೆ ಬಂದಾಗ ದೃಷ್ಟಿ ಹೊರಳಿಸುವ ಮಗ, ಅವನ ಅನಾರೋಗ್ಯ, ತನ್ನ ಉದ್ಯೋಗದ ಅವಸರದಲ್ಲಿ ಉಪೇಕ್ಷೆ ಮಾಡುವ ಅವನ ಹೆಂಡತಿ, ಏನು ಮಾತಾಡಿದರೂ ಪ್ರತಿಧ್ವನಿಸುವ ಗೋಡೆಗಳು… ಹೊರಗಿನ ಬೆಂಕಿಯಿಂದ ಓಡಬಹುದು, ಒಳಗಿನ ಉರಿಯಿಂದ.. ಮುಂದೆ ಯೋಚಿಸಲಾಗದೆ ಮತ್ತೆ ಸದ್ಯಕ್ಕೆ ಬಂದೆ.

ಕಾರು ಆಗಲೇ ಸಾಕಷ್ಟು ದೂರ ಬಂದಿರಬೇಕು, ಆಗಾಗ ಕಿಟಕಿಯ ಗಾಜು ಇಳಿಸಿ ಹೊರಗಿನ ಗಾಳಿಯನ್ನು ಬರಮಾಡಿಕೊಳ್ಳುತ್ತಿದ್ದ; ಅದಿನ್ನೂ ಪೂರ್ತಿಯಾಗಿ ಹೊಗೆಮುಕ್ತವಾಗಿರಲಿಲ್ಲ. ಸ್ವಲ್ಪ ಕೆಮ್ಮು ಬಂತು.

'ನಾನು ಅಜ್ಜಿ ಅಂತ ಕರೆದ್ದಕ್ಕೆ ಕೋಪ ಬಂದಿಲ್ಲ ಅಲ್ವಾ?'

ನಿದ್ದೆಯ ಈ ಅವಧಿಯಲ್ಲಿ ಎಚ್ಚರವಾಗಿ ಇರಲಿಕ್ಕೋ ಏನೋ ಅವನಿಗೆ ಏನಾದರೂ ಮಾತನಾಡುವ ಮನಸ್ಸಾಗಿರಬೇಕು. ನನ್ನ ಕಣ್ಣು ಕತ್ತಲೆಗೆ ಹೊಂದಿಕೊಂಡಿತ್ತೋ ಅಥವಾ ಕಾರಿನೊಳಗಿನ ಬೆಳಕು ಇನ್ನಷ್ಟು ಹೆಚ್ಚಾಗಿತ್ತೋ ಅವನ ಮುಖವನ್ನು ಮೊದಲ ಬಾರಿಗೆ ಸರಿಯಾಗಿ ನೋಡಿದಾಗ ನನ್ನ ಮೊಮ್ಮಗನ ವಯಸ್ಸಿನವನೇ ಇರಬಹುದು ಎಂದುಕೊಂಡೆ. ಈ ಸರಿರಾತ್ರಿಯಲ್ಲಿ ಬೆಂಕಿಯೊಡನೆ ಹೆಣಗುತ್ತಿರುವ ಅವನ ಕುರಿತು ಅನುಕಂಪ ಮೂಡಿತು.

'ಹಾಗೇನೂ ಇಲ್ಲ, ಏನು ನಿನ್ನ ಹೆಸರು?' ಅಂದೆ.

'ಅನ್ಸೆಲ್ಮೋ; ಕರೆಯಲು ಕಷ್ಟವಾದರೆ ಏಮೂ ಅಂತಲೂ ಕರೆಯಬಹುದು' ಅಂದ.

ಏಮೂ ಎಂದು ಹೇಳುವ ರೀತಿಯಲ್ಲಿ, ಅವನನ್ನು ಮನೆಯಲ್ಲಿ ಹಾಗೆಯೇ ಕರೆಯುತ್ತಾರೆ, ಅದನ್ನವನು ಇಷ್ಟಪಡುತ್ತಾನೆ ಎಂದು ತಿಳಿದೆ.

'ಅನ್ಸೆಲ್ಮೋ ಚಂದದ ಹೆಸರು, ಆದರೂ ಏಮೂ ಅಂತಲೆ ಕರೆಯುವೆ. ಇನ್ನೂ ಓದ್ತಾ ಇದ್ದೀಯಾ?'

'ಇಲ್ಲ' ಅವನ ದನಿಯಲ್ಲಿ ನಿರಾಸೆಯೋ, ಕೀಳರಿಮೆಯೋ ತಿಳಿಯಲಾಗಲಿಲ್ಲ.

'ಹೋಗಲಿ ಬಿಡು, ಏನೋ ಒಂದು ಕೆಲಸ ಮಾಡಿಕೊಂಡಿದ್ದೀಯಾ, ಸಂತೋಷದಿಂದ ಇದ್ದರಾಯ್ತು' ಎಂದೆ.

ಆಗಾಗ ನನ್ನತ್ತ ದೃಷ್ಟಿ ಹಾಯಿಸುತ್ತಿದ್ದ. ಏನೋ ಕೇಳಲು ತಯಾರಿ ನಡೆಸಿದಂತಿತ್ತು. ಸ್ವಲ್ಪ ಹೊತ್ತು ಸುಮ್ಮನಿದ್ದ.

'ಈಗ ನೀವು ಹೋಗುತ್ತಿರುವುದು ನಿಮ್ಮದೇ ಮನೆಯೇನು?'

'ಹೌದು, ನನ್ನದೇ ಮನೆ. ಮಗ ಇದ್ದಾನೆ. ಅವನಿಗೂ ನಿನ್ನಷ್ಟೇ ವಯಸ್ಸಿನ ಮಗನಿದ್ದಾನೆ. ನನ್ನ ಮೊಮ್ಮಗ ಇನ್ನೂ ಓದುತ್ತಿದ್ದಾನೆ'

ಮೊಮ್ಮಗನ ಮುಖ ನೆನಪಾಗಿ ಖುಷಿಯಾಯಿತು; ಏನನ್ನಾದರೂ ಮಾಡಬಲ್ಲ ಧೈರ್ಯ, ಹಟ, ಕೆಸುವಿನೆಲೆಯ ಮೇಲೆ ಓಡುವ ನೀರ ಗುಳ್ಳೆಯ ಚುರುಕು; ಎಲ್ಲ ನನ್ನಂತೆಯೇ. ಮನೆಯ ಯಾವ ಸಮಸ್ಯೆಯೂ ಅವನನ್ನು ಕಂಗೆಡುವಂತೆ ಮಾಡಲಾರವು. ಆದರೆ ಎಳೆವಯಸ್ಸಿನಲ್ಲಿಯೂ ಜವಾಬ್ದಾರಿ ಅರಿತ ಹುಡುಗ. 'ಅಜ್ಜಿ, ಮನೆಯಲ್ಲಿ ಇರಲು ಬೇಜಾರಾದರೆ ಔಟ್ ಹೌಸಿನಲ್ಲಿ ಇರಬಹುದಲ್ವ? ನಿಮ್ಮ ವಯಸ್ಸಿನವರ ಜೊತೆ ಬೇಕಿದ್ದರೆ ವೃದ್ಧಾಶ್ರಮ ಸೇರಿಕೊಳ್ಳಿ. ನಿಮಗೆ ಹೇಗೆ ಬೇಕೋ ಹಾಗೆ ಮಾಡಿ' ಅನ್ನುತ್ತಾನೆ. ತನ್ನ ಮನಸ್ಸಿಗೆ ಬಂದಾಗ ಫೋನ್ ಮಾಡುತ್ತಾನೆ. ಕೈಲಿದ್ದ ಫೋನನ್ನೊಮ್ಮೆ ನೋಡಿಕೊಂಡೆ. ಬೆಳಗಾಗುತ್ತಲೇ ಅವನಿಗೂ ಫೋನ್ ಮಾಡಿ ವಿಷಯ ತಿಳಿಸಬೇಕು ಎಂದುಕೊಂಡೆ.

'ಅಂದರೆ ಮಗನ ಮನೆಗೆ ಹೋಗ್ತಿದ್ದೀರಿ. ಅವರಿಗೆ ನೀವು ಬರುತ್ತಿರುವುದು ತಿಳಿದಿದೆಯೇ?'

'ಮನೆ ನನ್ನದೇ, ಮಗ-ಸೊಸೆ ಅಲ್ಲಿರ್ತಾರೆ; ನಾನಿವತ್ತು ಬರ್ತಿರೋದು ಅವರಿಗೆ ತಿಳಿದಿರಲಿಕ್ಕಿಲ್ಲ' ಎಂದಷ್ಟೇ ಹೇಳಿದೆ.

ಅವನ ಪ್ರಶ್ನೆಗಳು ಔಪಚಾರಿಕವಾಗಿರಲಿಲ್ಲ. ಆದರೂ ಅಪರಿಚಿತನಲ್ಲಿ ಎಷ್ಟು ಹೇಳಬೇಕೆಂದು ತಿಳಿಯಲಿಲ್ಲ.

ನಾನು ಬರುವುದು ಮಗನಿಗೆ ತಿಳಿದಿರಲು